ತಣ್ಣಗೆ ಹೇಳಿದರು.

'ಏ ಕಟ್ಟೀಮನಿ ಎಲ್ಲಿ ಸತ್ಯೋ, ಬಡಾನ ಬಾ. ರಾಜೀವ ಸಾಹೇಬರು ಬೆಂಗಳೂರಿಂದ ಬಂದಾರ ಅವರಿಗೆ ಚಾ, ಪಾನಿ ವ್ಯವಸ್ಥಾ ಮಾಡು...' ಎಂದು ವ್ಯಂಗ್ಯ ಬೆರೆತ ಧ್ವನಿಯಲ್ಲಿ ಹೇಳುತ್ತಾ ಡೆಪ್ಯೂಟಿ ತಹಸೀಲ್ದಾರ್, ರಾಜೀವನ ಮುಖ ನೋಡಿದರು.



'ಮತ್ತೇನದ ಸಾಹೇಬರ ಬೆಂಗಳೂರ ಕಡೀ ಸಮಾಚಾರ? ನೀವೇನು ಮಾಡಿಕೊಂಡೀರಿ...' ಎಂದು ಸಹಜವಾಗಿ ಕೇಳಿದರು. ರಾಜೀವ ತಾನು ಕೆಲಸ ಮಾಡುತ್ತಿದ್ದ ಪತ್ರಿಕೆಯ ಹೆಸರು ಹೇಳುತ್ತಿದ್ದಂತೆ, ಹಂಗೇನು ಎನ್ನುತ್ತಾ ಏ ಕಟ್ಟೀಮನಿ, ಅಣ್ಣಾರಾಯನ್ನ ಕರಕಂಡ್ ಬಾ ಎಂದು ಜವಾನನಿಗೆ ಹೇಳಿದರು. ರೆಗ್ಯುಲರ್ ಸಾಹೇಬರು ಇಲ್ಲ ಅಂದರ ನಮ್ಮ ಆಫೀಸು ನಿದ್ದಿ ಮಾಡತದ ಎಂಬ ತಮ್ಮ ಜೋಕಿಗೆ ಒಬ್ಬರೇ ನಗುತ್ತಾ, ಕೂಡ್ರಿ ಸಾಹೇಬರ. ನಿಮಗ ಬೇಕಾದ ಮಾಹಿತಿ ನಮ್ಮ ಕಡೀ ಅದಾವೇನೊ ನೋಡಿ ಹೇಳತೀನಿ ಎಂದರು.

ಅಲ್ಲಿ ಕೂತಿರುವಾಗ ರಾಜೀವನಿಗೆ ವೆಂಕಟರಾವ್ ನೆನಪಾದರು. ಚೇಂಬರಿನಿಂದ ಹೊರಬಂದು ಅವರಿಗೆ ಫೋನ್ ಮಾಡಿದ. ಐದಾರು ಸಲ ಮೇಲಿಂದ ಮೇಲೆ ಮಾಡಿದರೂ ಅವರು ಫೋನ್ ಎತ್ತಲಿಲ್ಲ. ಹತ್ತು ನಿಮಿಷ ಕಳೆದ ಮೇಲೆ ಅವರಿಂದ ಫೋನ್ ಬಂತು.

'ವೆಂಕಟರಾವ್ ಅವರಿಗೆ ಡಯಾಲಿಸಿಸ್ ನಡದದ, ಮೂರು ಗಂಟೆ ಮ್ಯಾಲ ಅವರ ನಿಮಗ ಫೋನ್ ಮಾಡ್ತಾರಂತ...' ಎಂದು ಹೆಂಗಸೊಬ್ಬಳು ಹೇಳಿದ್ದನ್ನು ಕೇಳಿ ರಾಜೀವನಿಗೆ ಆಶ್ಚರ್ಯವಾಯಿತು. ಆ ಹೆಂಗಸು ವೆಂಕಟರಾವ್ ಮಗಳೋ, ಸೊಸೆಯೋ ಇರಬಹುದು ಅನ್ನಿಸಿತು. ಮೂರು ಗಂಟೆತನಕ ಏನು ಮಾಡುವುದು ಎನ್ನುವುದು ಗೊತ್ತಾಗದೆ ತಹಸೀಲ್ದಾರ್ ಆಫೀಸಿನ ಆವರಣದಲ್ಲಿ ನಿಂತಿದ್ದ ಜನರ ಬಳಿ ಹೋದ. ನಿಮ್ಮದು ಯಾವ ಊರು ಎಂದು ಎಲ್ಲರನ್ನೂ ಕೇಳಿದ. ಮೂರ್ನಾಲ್ಕು ಜನ ತಮ್ಮ ಊರುಗಳ ಹೆಸರು ಹೇಳಿ ನಿಮಗೇನು ಬೇಕು ಎನ್ನುವಂತೆ ರಾಜೀವನ ಮುಖ ನೋಡಿದರು. ಬಹಳ ವರ್ಷಗಳ ಹಿಂದೆ ಇದೇ ರಾಯಭಾಗದಲ್ಲಿ ಮಾಧವರಾವ್ ರಾನಡೆ ಅನ್ನೋ ಜಮೀನ್ದಾರರಿದ್ದರಂತೆ. ಅವರ ಬಗ್ಗೆ ಮಾಹಿತಿ ಬೇಕಿತ್ತು. ಅವರು ನಿಮಗೆ ಗೊತ್ತೇ ಎಂದು ಕೇಳಿದ. ಯಾರೂ ಉತ್ತರಿಸಲಿಲ್ಲ. ರಾನಡೆಯವರು ರಾಯಭಾಗ ತಾಲ್ಲೂಕಿನ ದೊಡ್ಡ ಭೂಮಾಲೀಕರು' ಅಂದ. 'ಇಲ್ರೀ, ಈಗ ಭೂಮಾಲೀಕರು ಉಳಿದಿಲ್ಲ... ಕಾಗವಾಡದಾಗ ಒಬ್ಬರು ಅದಾರ. ಅವರ ಹೆಸರು ರಾನಡೆ ಅಲ್ಲ...' ಎಂದು ಒಬ್ಬ ಹೇಳಿದ.

ರಾಜೀವ ಆಫೀಸು ಆವರಣದಲ್ಲಿದ್ದ ಸಣ್ಣ ಹೊಟೇಲಿಗೆ ಹೋಗಿ ಕೂತು ಅಲ್ಲಿದ್ದವರ ಜತೆ ಮಾತಿಗಿಳಿದ. 'ರಾನಡೆ ಅನ್ನೋ ಅಡ್ಡ ಹೆಸರಿನವರು ಮೀರಜ್‌ನಾಗ ಭಾಳ್‌ಮಂದಿ ಸಿಕ್ತಾರ...' ಎಂದು ಒಬ್ಬ ಹೇಳಿದ. ತುಂಬಾ ಹೊತ್ತಿನತನಕ ಅಲ್ಲಿ ಕೂತಿದ್ದು ಬಂದವರನ್ನೆಲ್ಲ ವಿಚಾರಿಸಿದ.

ಮೂರು ಗಂಟೆಗೆ ವೆಂಕಟರಾವ್ ಅವರ ಫೋನ್ ಬಂತು. 'ಮುಂಜಾನಿ ಫೋನ್ ಮಾಡಿದ್ದು ನೀವಾ ಏನು?' ಎಂದು ಕ್ಷೀಣ ಧ್ವನಿಯಲ್ಲಿ ವೆಂಕಟರಾವ್ ಕೇಳಿದರು. 'ಹೌದು ಸರ್, ರಾಜೀವ ಅಂತ ನನ್ನ ಹೆಸರು. ನಾಲ್ಕು ದಿನಗಳ ಹಿಂದೆ ನಾನು ನಿಮಗೆ ಫೋನ್ ಮಾಡಿದ್ದೆ. ಸುಹಾಸ್ ರಾನಡೆಯ ಫ್ರೆಂಡು' ಎಂದು ಪರಿಚಯ ಹೇಳಿಕೊಂಡ. ಹಂಗೇನು ಎಂದ ಅವರ ಧ್ವನಿಯಲ್ಲಿ ತ್ರಾಣ ಇರಲಿಲ್ಲ.

'ಸುಹಾಸ ನನ್ನ ಮಗ. ಹುಟ್ಟಿದ ದಿನವೇ ಅವ್ನ, ಅವನ ಅವ್ವನ್ನ ತಿಂದುಕೊಂಡ!. ಮಗ ಅಂದರೆ ಮಗ ಅಷ್ಟೆ...' ಎಂದು ವೆಂಕಟರಾವ್ ವಿಷಾದದ ಧ್ವನಿಯಲ್ಲಿ ಹೇಳಿ ಹತ್ತಿಪ್ಪತ್ತು ಸೆಕೆಂಡು ಮೌನಕ್ಕೆ ಜಾರಿದರು.

'ಮಾಧವರಾವ್ ನನ್ನ ಅಣ್ಣ, ಅಂದ್ರ ನಮ್ಮ ದೊಡಪ್ಪನ ಮಗ. ಅವ್ನ ಸತ್ತು ಇಪ್ಪತ್ತೈದು ವರ್ಷಗಳಾದ್ವು. ಅವ್ನ ಪುಣಾದಾಗ ಇರತಿದ್ದ. ವಿಠಲರಾವ್ ದೇಸಾಯಿ ಅನ್ನೋರ ಹೊಲ, ಮನಿ ನಿಗಾ ನೋಡ್ತ ರಾಯಭಾಗಕ್ಕ ಬಂದು ಹೋಗಿ